(33)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸವನಗೌಡ ಬಾದರ್ಲಿ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

*************************************************************************************

**ಸೂಚನೆ:**

ರಾಜ್ಯ ಸರ್ಕಾರಿ ಸ್ವಾಮ್ಯದ 'ಹಟ್ಟಿ ಚಿನ್ನದ ಗಣಿ ಕಂಪನಿಯು ತನ್ನ ಅವೈಜ್ಞಾನಿಕ ಉತ್ಪಾದನೆಯಿಂದಾಗಿ 2025ರ ಡಿಸೆಂಬರ್ ಅಂತ್ಯಕ್ಕೆ ನಿಗದಿತ ಗುರಿಗಿಂತ ಸುಮಾರು 285 ಕೆ.ಜಿ ಕಡಿಮೆ ಚಿನ್ನವನ್ನು ಹಾಗೂ ಸುಮಾರು 1.31 ಲಕ್ಷ ಟನ್ ಕಡಿಮೆ ಅದಿರನ್ನು ಉತ್ಪಾದಿಸಿರುವುದಾಗಿ ದಿನಾಂಕ:17.01.2026 ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುವ ಕುರಿತು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಗಮನ ಸೆಳೆದಿರುತ್ತಾರೆ.

**ಉತ್ತರ:**

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯು Mineral Conservation & Development Rules(MCDR), 2023ರ ನಿಯಮಗಳಂತೆ ಮತ್ತು ಲಭ್ಯವಿರುವ ಅದಿರು ನಿಕ್ಷೇಪದ ಆಧಾರದ ಮೇಲೆ ಐದು ವರ್ಷಗಳ ಬ್ಲಾಕ್ ಅವಧಿಗೆ ಗಣಿ ಯೋಜನೆಯನ್ನು (Mining plan) ತಯಾರಿಸುತ್ತಿದ್ದು, ಸದರಿ ಯೋಜನೆಯನ್ನು Indian bureau of mines (IBM) ಸಂಸ್ಥೆಯು ವೈಜ್ಞಾನಿಕವಾಗಿ ಪರಿಶೀಲಿಸಿ ಮಾರ್ಗಸೂಚಿಗಳನುಸಾರ ಅನುಮೋದಿಸುತ್ತದೆ.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದಲ್ಲಿ 2025-26ನೇ ಸಾಲಿನ ಡಿಸೆಂಬರ್ 2025 ಅಂತ್ಯ ಕ್ಕೆ 5,70,000 ಮೆಟ್ರಿಕ್ ಟನ್ ಅದಿರು ಮತ್ತು 1187 ಕೆಜಿ ಚಿನ್ನದ ಉತ್ಪಾದನೆಯ ಗುರಿಯನ್ನು ನಿಗದಿ ಪಡಿಸಲಾಗಿತ್ತು.

ಪ್ರಸ್ತುತ, ಡಿಸೆಂಬರ್ 2025 ರವರೆಗೆ 4,39,434 ಮೆಟ್ರಿಕ್ ಟನ್ ಅದಿರು ಉತ್ಪಾದನೆ ಮತ್ತು 901.50 ಕೆಜಿ ಚಿನ್ನದ ಉತ್ಪಾದನೆಯನ್ನು ಸಾಧಿಸಿದ್ದು, 1,30,566 ಮೆಟ್ರಿಕ್ ಟನ್ ಅದಿರು ಮತ್ತು 285 ಕೆಜಿ ಚಿನ್ನದ ಉತ್ಪಾದನೆಯ ಕೊರತೆಯಾಗಿದೆ.

| Month | Budgeted Tonnage | Budgeted Gold(Kg) | Actual Tonnage(T) | Actual Gold (T) | Variance Tonnage(T) | Variance Gold (grams) |
|---|---|---|---|---|---|---|
| Apr-25 | 60000 | 121830 | 45853 | 113011 | -14147 | -8819 |
| May-25 | 65000 | 134919 | 38151 | 104737 | -26849 | -30182 |
| Jun-25 | 60000 | 120942 | 28023 | 75946 | -31977 | -44996 |
| Jul-25 | 67500 | 136061 | 49339 | 94238 | -18161 | -41823 |
| Aug-25 | 62500 | 127126 | 55201 | 119406 | -7299 | -7720 |
| Sep-25 | 65000 | 132210 | 48829 | 83018 | -16171 | -49192 |
| Oct-25 | 62500 | 136245 | 57997 | 91202 | -4503 | -45043 |
| Nov-25 | 62500 | 136245 | 53983 | 86978 | -8517 | -49267 |
| Dec-25 | 65000 | 141472 | 62058 | 133001 | -2942 | -8471 |
| **TOTAL** | **570000** | **1187050** | **439434** | **901538** | **-130566** | **-285512** |

**ಮುಂದುವರೆದು, ಉತ್ಪಾದನೆಯಲ್ಲಿ ನಿಗದಿಪಡಿಸಿದ ಗುರಿಗಿಂತ ಉತ್ಪಾದನೆಯಲ್ಲಿ ಕೊರತೆಯಾಗಲು ಪ್ರಮುಖ ಕಾರಣಗಳು ಕೆಳಕಂಡಂತಿವೆ:-**

1) **<u>2700 ಅಡಿಯ ಹಂತದಲ್ಲಿರುವ Ore Pass Bin ದುರಸ್ಥಿ ಕಾರ್ಯ:-</u>**

ಹಟ್ಟಿ ಗಣಿಯ ಉತ್ಪಾದನೆಯು ಪ್ರಮುಖವಾಗಿ ಹೊಸ ಸರ್ಕ್ಯೂಲರ್ ಶಾಫ್ಟ್ (circular Shaft)ನ ಮೂಲಕ ಅದಿರು ನಿರ್ವಹಣೆ ಮತ್ತು ಸಾಗಣೆ ವ್ಯವಸ್ಥೆಯ ಮಾಡಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ 2700 ಅಡಿಯಲ್ಲಿ ಕ್ರಷರ್ ಮತ್ತು ಕನ್ವೇಯರ್ (Crusher & Conveyor) ವ್ಯವಸ್ಥೆಯು ಸಹ ಒಳಗೊಂಡಿರುತ್ತದೆ.

ಈ ವ್ಯವಸ್ಥೆಯ ಅವಿಭಾಜ್ಯ ಅಂಗವಾದ Ore Pass Bin ಸವಕಳಿಯಾದ ಕಾರಣ ಏಪ್ರಿಲ್ 2025 ರಲ್ಲಿ ಉತ್ಪಾದನೆಗೆ ಪದೇ ಪದೇ ಅಡಚಣೆ ಉಂಟಾಗುತ್ತಿದ್ದು, ಉತ್ಪಾದನೆಯನ್ನು ಸುಗಮಗೊಳಿಸುವ ಸಲುವಾಗಿ Ore Pass Bin ನ ಪ್ರಮುಖ ದುರಸ್ತಿ (Major repair) ಕಾರ್ಯವನ್ನು ಮೇ ಮತ್ತು ಜೂನ್, 2025 ರಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ದುರಸ್ತಿ ಕಾರ್ಯವು ಶಾಸನಬದ್ಧ ಮಾರ್ಗಸೂಚಿಗಳ ಅನುಸಾರದ ಭೂಕೆಳಮೈನ ಸೀಮಿತ ಜಾಗದಲ್ಲಿ ಕೈಗೊಳ್ಳಬೇಕಾಗಿದ್ದರಿಂದ ಹಾಗೂ ಕಾರ್ಮಿಕರ ಸುರಕ್ಷತೆಯ ಹಿತದೃಷ್ಟಿಯನ್ನು ಖಚಿತಪಡಿಸಿಕೊಳ್ಳಬೇಕಾಗಿರುವ ಕಾರಣಗಳಿಂದಾಗಿ ಸಾಕಷ್ಟು ಕಾಲಾವಧಿಯನ್ನು ತೆಗೆದುಕೊಂಡಿದೆ.

ಪ್ರಮುಖ ದುರಸ್ತಿಯ ಕಾರಣಗಳಿಂದಾಗಿ ಮೇ ಮತ್ತು ಜೂನ್, 2025 ರಲ್ಲಿ ಸುಮಾರು 59000 ಮೆಟ್ರಿಕ್ ಟನ್ ಅದಿರು ಉತ್ಪಾದನೆ ಮತ್ತು ಸುಮಾರು 79 ಕೆಜಿ ಚಿನ್ನದ ಉತ್ಪಾದನೆಯಲ್ಲಿ ಕೊರತೆಯಾಗಿದೆ.

**<u>2700 ಮತ್ತು 2800 ಅಡಿ ಹಂತದಲ್ಲಿ ಕಾರ್ಯನಿರ್ವಹಿಸಲು ಡಿ.ಜಿ.ಎಮ್.ಎಸ್ ಕಾರ್ಯಾಲಯದಿಂದ ನಿರ್ಬಂಧ:-</u>**

ಜೂನ್ 1, 2025 ರಂದು ಹಟ್ಟಿ ಗಣಿಯಲ್ಲಿ 2800 ಅಡಿ ಮಟ್ಟದ ಅಭಿವೃದ್ಧಿ ಹಂತದಲ್ಲಿ ಸಂಭವಿಸಿದ ಮಾರಣಾಂತಿಕ ಅಪಘಾತದಿಂದಾಗಿ ಗಣಿ ಸುರಕ್ಷತಾ ಮಹಾನಿರ್ದೇಶನಾಲಯವು (ಡಿ.ಜಿ.ಎಮ್.ಎಸ್) 2700 ಮತ್ತು 2800 ಅಡಿಯಲ್ಲಿ ಉತ್ಪಾದನೆಯನ್ನು ಸ್ಥಗಿತಗೊಳಿಸುವಂತೆ ಹಾಗೂ ಸದರಿ ಹಂತಗಳಲ್ಲಿ ಹೆಚ್ಚುವರಿ ವೈಜ್ಞಾನಿಕ ಅಧ್ಯಯನವನ್ನು ಕೈಗೊಳ್ಳಲು ಹಾಗೂ ವರದಿಯ ಆಧಾರದ ಮೇಲೆ ಕಾರ್ಯಾಚರಣೆಗಳನ್ನು ಪುನರಾರಂಭಿಸಲು ಹಟ್ಟಿ ಚಿನ್ನದ ಗಣಿಗೆ ಸೂಚಿಸಿರುತ್ತದೆ.

ಅದರಂತೆ, ಹಟ್ಟಿ ಚಿನ್ನದ ಗಣಿ ಕಂಪನಿಯು ಭಾರತ ಸರ್ಕಾರದ ವೈಜ್ಞಾನಿಕ ಸಂಸ್ಥೆಯಾದ CIMFR ಎಂಬ ಸಂಸ್ಥೆಯನ್ನು ಅಧ್ಯಯನಕ್ಕೆ ನೇಮಿಸಿಕೊಂಡಿರುತ್ತದೆ. ಅಧ್ಯಯನ ಕಾರ್ಯವು ಮುಕ್ತಾಯಗೊಂಡಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.

2700 ಮತ್ತು 2800 ಅಡಿ ಹಂತಗಳಿಂದ ದಿನಕ್ಕೆ 300 ಟನ್ ಉತ್ಪಾದಿಸಲು ಯೋಜಿಸಲಾಗಿತ್ತು. ಆದರೆ, ಸದರಿ ಹಂತಗಳಲ್ಲಿನ ಕಾಮಗಾರಿಗಳನ್ನು ಸ್ಥಗಿತಗೊಂಡಿದ್ದರಿಂದ, ಡಿಸೆಂಬರ್ 2025 ರವರೆಗೆ ಸುಮಾರು 45000 ಮೆಟ್ರಿಕ್ ಟನ್ ಅದಿರು ಉತ್ಪಾದನೆ ಕಡಿಮೆಯಾಗಿ, ಸುಮಾರು 119 ಕೆಜಿ ಚಿನ್ನದ ಉತ್ಪಾದನೆಯಲ್ಲಿ ಕೊರತೆಯಾಗಿದೆ.

**<u>3. ಹೀರಾ-ಬುದ್ದಿನ್ನಿ ಚಿನ್ನದ ಗಣಿಯ ವೈಂಡರ್‌ನಲ್ಲಿ ಉಂಟಾದ ತಾಂತ್ರಿಕ ದೋಷ:-</u>**

ದಿನಾಂಕ:14.10.2025 ರಂದು ಹೀರಾ-ಬುದ್ದಿನ್ನಿ ಗಣಿಯಲ್ಲಿನ ವೈಂಡರ್‌ನ ಡ್ರಮ್ ಶಾಫ್ಟ್ ಬಿರುಕುನಿಂದ ಉಂಟಾದ ತಾಂತ್ರಿಕ ದೋಷದಿಂದ ಉತ್ಪಾದನೆ ಸ್ಥಗಿತಗೊಂಡಿದೆ. ವೈಂಡರ್‌ನ ಹೊಸ ಶಾಫ್ಟ್ ತಯಾರಿಸಿ ಅಳವಡಿಸಬೇಕಾಗಿದ್ದು ಈ ಕೆಲಸವು ಜನವರಿ ಅಂತ್ಯಕ್ಕೆ ಪೂರ್ಣಗೊಳಿಸುವ ನಿರೀಕ್ಷೆಯಿದೆ.

ಹಿರಾ-ಬುದ್ದಿನ್ನಿ ಗಣಿಯಲ್ಲಿ ಉತ್ಪಾದನೆಯನ್ನು ಸ್ಥಗಿತಗೊಂಡಿರುವದರಿಂದ ಡಿಸೆಂಬರ್ 2025 ರವರೆಗೆ ಸುಮಾರು 9750 ಮೆಟ್ರಿಕ್ ಟನ್ ಅದಿರು ಉತ್ಪಾದನೆ ಮತ್ತು ಸುಮಾರು 33 ಕೆಜಿ ಚಿನ್ನದ ಉತ್ಪಾದನೆಯ ಕೊರತೆ ಉಂಟಾಗಿದೆ.

ಆದ್ದರಿಂದ, ಈ ಎಲ್ಲಾ ಪ್ರಮುಖ ತಾಂತ್ರಿಕ ಹಾಗೂ ಶಾಸನಬದ್ಧ ನಿಯಮಗಳ ಕಾರಣಗಳಿಂದಾಗಿ ಸುಮಾರು 113750 ಮೆಟ್ರಿಕ್ ಟನ್ ಅದಿರು ಉತ್ಪಾದನೆ ಮತ್ತು 231 ಕೆಜಿ ಚಿನ್ನದ ಉತ್ಪಾದನೆಯಲ್ಲಿ ಕೊರತೆಯಾಗಿದೆ.

ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಗಣಿಗಾರಿಕೆ ಕಾರ್ಯಾಚರಣೆಗಳನ್ನು National Institute of Rock Mechanics(NIRM), Central Institute of Mines & Fuel Research (CIMFR) ನಂತಹ ವೈಜ್ಞಾನಿಕ ಸಂಸ್ಥೆಗಳು ಮತ್ತು Ministry of Environment, Forest and Climate Change (MoEF), Director General of Mines Safety (DGMS) ಮತ್ತು Indian Bureau of Mines(IBM) ನಂತಹ ನಿಯಂತ್ರಕ ಪ್ರಾಧಿಕಾರಿಗಳ ಶಿಫಾರಸುಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ನಿರ್ವಹಿಸಲಾಗುತ್ತಿದೆ. ಹಾಗೂ ಹಟ್ಟಿ ಚಿನ್ನದ ಗಣಿ ಕಂಪನಿಯು ವೈಜ್ಞಾನಿಕ ಮತ್ತು ಸುಸ್ಥಿರವಾದ ಗಣಿಕಾರಿಕೆಗೆ ಆದ್ಯತೆ ನೀಡಲಾಗಿದೆ.

ಸಂಖ್ಯೆ ಸಿಐ-ಸಿಎಂಸಿ/08/20256

S. S. [signature]

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು